# **37** ನೇ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

## ಸಿ.ಸಿ. ನಂ. **13412/2019**

ಫ್ರಾ.ಸಃ **1** ಚಾ.ಸಃ **1**

| | |
|---|---|
| ಸಾಕ್ಷಿದಾರರ ಹೆಸರು | ಉಮಾ ಮಹೇಶ್ವರಿ |
| ಗಂಡನ ಹೆಸರು | ಚಂದ್ರ ಬಾಬು |
| ವಯಸ್ಸು | 52 ವರ್ಷ |
| ಉದ್ಯೋಗ | ಗೃಹಿಣಿ |
| ವಿಳಾಸ | ಜಯನಗರ, ಬೆಂಗಳೂರು. |
| ಪ್ರ ವ ಬೋ ದಿನಾಂಕ | 26.10.2021. |

ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ

ಒಂದನೇ ಆರೋಪಿ ನನ್ನ ಭಾವ, ಎರಡನೇ ಆರೋಪಿ ಒಂದನೇ ಆರೋಪಿಯ ಮಗ, ದಿ. 31.08.2018 ರಂದು ಸಂಜೆ 06 ರಿಂದ 07 ಗಂಟೆಯ ಸಮಯದಲ್ಲಿ ನಮ್ಮ ಮೈದುನನ ಮನೆಯಲ್ಲಿ ವಾಸವಾಗಿರುವ ಚಾಸಾ.2 ರವರ ಜೊತೆ ಮಾತನಾಡುತ್ತ ನಿಂತಿದ್ದಾಗ ಒಂದನೇ ಆರೋಪಿತನು ಆಸ್ತಿಯ ವಿಚಾರವಾಗಿ ಜಗಳ ತೆಗೆದು ನಿನಗೂ ನಿನ್ನ ಮಕ್ಕಳಿಗೂ ಆಸ್ತಿಯಲ್ಲಿ ಏನೂ ಅಧಿಕಾರ ಇದೆ ಎಂದು ಹೆಲ್ಮೆಟ್ ನಿಂದ ನನಗೆ ತಲೆ, ಎಡಭುಜ ಮತ್ತು ಬೆನ್ನಿನ ಮೇಲೆ ಹಲ್ಲೆ ಮಾಡಿರುತ್ತಾರೆ. ಇದಾದ ನಂತರ ಎರಡನೇ ಆರೋಪಿಯು ಸಹ ಬಂದು ನನ್ನ ಬಟ್ಟೆ ಹಿಡಿದು ಎಳೆದಾಡಿ ಬಟ್ಟೆ ಹರಿದು ಹಾಕಿರುತ್ತಾನೆ. ಎರಡನೇ ಆರೋಪಿ ನನ್ನನ್ನು ಕುರಿತು ನೀನು ಡಾಗರ್ ಸೂಳೆ ಮುಂಡೆ ಎಂದು ಬೈದು ಅವಮಾನ ಮಾಡಿರುತ್ತಾನೆ ಅಷ್ಟರಲ್ಲಿ ಚಾಸಾ.4 ಬಂದು ಜಗಳ ಬಿಡಿಸಿರುತ್ತಾರೆ. ನಾನು ಪೊ.ಠಾಣೆಗೆ ದೂರು ನೀಡಲು ಹೋದಾಗ ಪೊಲೀಸರು ಮೊದಲು ಚಿಕಿತ್ಸೆ ಪಡೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ನಾನು ಜಯನಗರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ನಾನು ಪೊ.ಠಾಣೆಯಲ್ಲಿ ದೂರು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಂತರ ದಿ. 01.09.2018 ರಂದು ಬೆಳಗ್ಗೆ 09 ರಿಂದ 10 ಗಂಟೆಯ ಸಮಯದಲ್ಲಿ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಸದರಿ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನನ್ನ ಬಟ್ಟೆ ಹರಿದು ಹಾಕಿದ ಬಗ್ಗೆ ಪೊಟೋಗಳನ್ನು

ನೋಡುತ್ತಿದ್ದು ಅದನ್ನು ನಿಪಿ.3 ರಿಂದ 6 ಎಂದು ಗುರುತಿಸಲಾಯಿತು. ಘಟನೆ ಬಗ್ಗೆ ನಾನು ದಿ. 22.09.2018 ರಂದು ನ್ಯಾಯಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ.

ಘಟನೆಯ ಕಾಲಕ್ಕೆ ಚಾಸಾ.2 ರಿಂದ 5 ರವರು ಹಾಜರಿದ್ದ ಬಗ್ಗೆ ನಾನು ದಿ. 15.11.2018 ರಂದು ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಹಾಗೂ ಪೊಟೋಗಳನ್ನು ಹಾಜರುಪಡಿಸಿದ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ನ್ಯಾಯಲಯದ ಮುಂದೆ ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ  ಆರೋಪಿ ಪರ  ವಕೀಲರಿಂದಃ</u>

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು ಯಾವುದೇ ಸಕಾರಣ ಇಲ್ಲದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ    ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ

**37** ನೇ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ. **13412/2019**

ಪ್ರಾ.ಸಃ **2** ಚಾ.ಸಃ **4**

| | |
|---|---|
| ಸಾಕ್ಷಿದಾರರ ಹೆಸರು | ಸುಪ್ರಜಿತ್ ಕುಮಾರ್ |
| ತಂದೆಯ ಹೆಸರು | ಚಂದ್ರ ಬಾಬು |
| ವಯಸ್ಸು | 28 ವರ್ಷ |
| ಉದ್ಯೋಗ | ಮೆಕಾನಿಕ್ |
| ವಿಳಾಸ | ಜಯನಗರ, ಬೆಂಗಳೂರು. |
| ಪ್ರ ವ ಬೋ ದಿನಾಂಕ | 26.10.2021. |

ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ

ಒಂದನೇ ಆರೋಪಿ ನನ್ನ ದೊಡ್ಡಪ್ಪ, ಎರಡನೇ ಆರೋಪಿ ಒಂದನೇ ಆರೋಪಿಯ ಮಗ, ಚಾಸಾ.1 ನನ್ನ ತಾಯಿ. ದಿ. 31.08.2018 ರಂದು ಸಂಜೆ 06 ರಿಂದ 07 ಗಂಟೆಯ ಸಮಯದಲ್ಲಿ ನಾನು ಸ್ಪೇರ್ ಪಾರ್ಟ್ಸ ತರಲು ಹೊರೆಗ ಹೋಗಿ ಬರುವಷ್ಟರಲ್ಲಿ ಆರೋಪಿತರು ನಮ್ಮ ತಾಯಿಯ ಜೊತೆ ಆಸ್ತಿ ವಿಚಾರವಾಗಿ ಜಗಳ ತೆಗೆದು ಆಕೆಗೆ ಅವಾಚ್ಯ ಶಬ್ದಗಳಿಂದ ಬೈದು ಹೆಲ್ಮೆಟ್ ನಿಂದ ಹಲ್ಲೆ ಮಾಡಿ ಆಕೆಯ ಬಟ್ಟೆ ಹರಿದು ಹಾಕಿರುತ್ತಾರೆ. ಗಲಾಟೆಯನ್ನು ಚಾಸಾ.3 ವಕುತ್ತು 5 ರವರು ಬಿಡಿಸಿರುತ್ತಾರೆ. ನಾನು ಬರುವಷ್ಟರಲ್ಲಿ ಗಲಾಟೆ ಮುಗಿದಿತ್ತು. ಚಾಸಾ.3 ಮತ್ತು 5 ರವರು ಅಲ್ಲೆ ಇದ್ದರು. ಗಲಾಟೆ ಬಗ್ಗೆ ನನ್ನ ತಾಯಿ ತಿಳಿಸಿರುತ್ತರೆ. ನಂತರ ನಾನು ನನ್ನ ತಾಯಿಯನ್ನು ಪೊ.ಠಾಣೆಗೆ ಮತ್ತು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಗಲಾಟೆ ಬಗ್ಗೆ ನನ್ನ ತಾಯಿ ಆರೋಪಿತರ ವಿರುದ್ಧ ದೂರು ನೀಡಿರುತ್ತಾರೆ. ಗಲಾಟೆ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಮಾನ್ಯ ಹಿ.ಸ. ರವರರಿಂದಃ</u>

ನನನ್ನ ತಾಯಿ ಉಮಾ ಮಹೇಶ್ವರಿ ರವರು ನಮ್ಮ ಮನೆಯ ಮುಂಭಾಗದ ಪ್ಯಾಸೇಜ್ ------------------ ನಮ್ಮ ದೊಡ್ಡಪ್ಪ ಹಾಗೂ ಅವರ ಮಗ ಹರೀಶ್ ಕುಮಾರ್ ರವರ ಮೇಲೆ

ದೂರು ನೀಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಘಟನೆ ನಡೆದು ಮೂರು ವರ್ಷವಾದ ಕಾರಣ ನಾನು ಘಟನೆ ಬಗ್ಗೆ ನೆನಪಿರುವುದಿಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು ಯಾವುದೇ ಸಕಾರಣ ಇಲ್ಲದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ